ದಿನಾಂಕ: 05.09.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ವಾದಿಗಳ ಪರ ಶ್ರೀಮತಿ ಟಿ ಎಸ್ ಜಿ ವಕೀಲರಿಂದಃ**

ನಾನು ಡಿಪ್ಲೊಮೋ ಪಧವೀದರ. ಈ ಕೇಸ್ ಗೆ ಸಂಬಂಧಿಸಿದ ಸಮನ್ಸ್ ಬಂದಿರುತ್ತದೆ. ಯಾವ ದಿನಾಂಕದಂದು ಬಂದಿರುತ್ತದೆ ಎಂದು ನನಗೆ ನೆನಪಿಲ್ಲ. ನಾನು ಯಾವ ದಿನಾಂಕ ನ್ಯಾಯಾಲಯಕ್ಕೆ ಹಾಜರಾಗಿದ್ದೆ ಎಂದು ನೆನೆಪಿಲ್ಲ. ನ್ಯಾಯಾಲಯದಲ್ಲಿ ಏನು ಆದೇಶವಾಗಿದೆ ಎಂದು ನಾನು ತಿಳಿದುಕೊಂಡಿಲ್ಲ. ಆ ವಿಚಾರ ವಕೀಲರು ಹೇಳಿದ್ದರೋ ಇಲ್ಲವೋ ಎಂದು ನನಗೆ ನೆನಪಿಲ್ಲ. ದಿಃ18.08.2014 ರಲ್ಲಿ ದಾವೆ ಸಲ್ಲಿಸಿದ್ದು ಮರು ದಿನವೇ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡಿದ್ದಾರೆ ಎಂದು ನನಗೆ ಗೊತ್ತಿರುವುದಿಲ್ಲ. ಈ ದಾವೆಯಲ್ಲಿ ಪ್ರತಿವಾದ ಪತ್ರವನ್ನು ಯಾವಾಗ ಸಲ್ಲಿಸಿದ್ದೇನೆ ಎಂದು ನನಗೆ ನೆನಪಿಲ್ಲ

ದಾವಾಸ್ತಿಯ ಐಟಂ ನಂ.1 ರ ಆಸ್ತಿಯಲ್ಲಿ 12 ಎಕರೆ ಆಸ್ತಿಯನ್ನು ನಾನು ವಿಜಯಲಕ್ಷ್ಮಿ ಎನ್ನುವವರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನುಮಾರಾಟ ಮಾಡಿಲ್ಲ ನನ್ನ ತಂದೆ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನನ್ನ ತಂದೆಗೆ ಒಟ್ಟು 6 ಜನ ಮಕ್ಕಳು. 4 ಜನ ಹೆಣ್ಣು ಮಕ್ಕಳು, ಇಬ್ಬರು ಗಂಡು ಮಕ್ಕಳು. ಅವರಲ್ಲಿ ಮೊದಲನೆ ಹೆಣ್ಣು ಮಗಳು ಗಂಗಮ್ಮ ಮೃತ ಪಟ್ಟಿರುತ್ತಾರೆ. ಗಂಗಮ್ಮನ ಮಗಳೇ ನನ್ನ ಹೆಂಡತಿ ವೀಣಾಕ್ಷಿ ಎಂದರೆ ಸಾಕ್ಷಿಯು ಹೌದು 2016 ರಲ್ಲಿ ವಿಚ್ಚೇಧನ ಆಗಿದೆ ಎಂದು ನುಡಿಯುತ್ತಾರೆ. ಅದರ ಸಂಬಂಧ ಜೀವನಾಂಶದ ಅರ್ಜಿ ಚಾಲ್ತಿಯಲ್ಲಿ ಇದೆ ಎಂದರೆ ನಿಜ. ನಾನು ಜೀವನಾಂಶ ಪಾವತಿಸಿಲ್ಲ. ಇತ್ತೀಚೆಗೆ ನಾನು ನನ್ನ ಮಕ್ಕಳ ಮೇಲೆ ಜೀವನಾಂಶ ಕೊಡಿ ಎಂದು ಅರ್ಜಿ ಸಲ್ಲಿಸಿದ್ದೇನೆ ಎಂದರೆ ನಿಜ.

ನನ್ನ ತಮ್ಮ ಪ್ರಕಾಶ್ ಇವರು ವಿಭಾಗ ಕೇಳಿ ಇದೇ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿದ್ದಾರೆ ಎಂದರೆ ನಿಜ. ಆ ದಾವೆಯನ್ನು ನಾವೆಲ್ಲರೂ ಸೇರಿ ರಾಜಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ದಿಃ03.03.2015 ರಲ್ಲಿ ರಾಜಿ ಅರ್ಜಿ ಸಲ್ಲಿಸಿದ್ದು ಅದು 04.03.2015 ರಲ್ಲಿ ವಜಾ ಆಗಿದೆ ಎಂದರೆ ನೆನಪಿಲ್ಲ. ರಾಜೀ ಅರ್ಜಿಗೆ ನಾನು ಸಹ ಸಹಿ ಹಾಕಿದ್ದೇನೆ ಎಂದರೆ ನೆನಪಿಲ್ಲ. ಸದರಿ ದಾವೆಯಲ್ಲಿ ಗಂಗಮ್ಮನ ಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ನಿಜ. ಗಂಗಮ್ಮನ ಮಕ್ಕಳಿಗೆ ವಿಭಾಗ ಕೊಡಬೇಕು ಎಂಬ ಉದ್ದೇಶದಿಂದ ಅವರನ್ನು ಕಕ್ಷಿದಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು